# ಕೇರ್ ಕ್ರೈಸಿಸ್!

**ಕೊರೊನಾ ನಂತರ ಬಿಕ್ಕಟ್ಟುಗಳ ಪಟ್ಟಿಗೆ ಹೊಸ ಸೇರ್ಪಡೆ**

**ಕುಟುಂಬ ವ್ಯವಸ್ಥೆಯಲ್ಲಿ ಪಲ್ಲಟ 'ಸಾಂತ್ವನ ಸುಖ'ದ ಸೇವೆಗಳ ಕಾಲ**

ಕುಟುಂಬ ವ್ಯವಸ್ಥೆಯ ನಂಬಿಕೆಗಳು ಕ್ಷಿಪ್ರವಾಗಿ ಬದಲಾಗುತ್ತಿರುವ ದಿನಗಳಿವು. ಅವಿಭಕ್ತ ಕುಟುಂಬಗಳು ಫೋಟೊ ಆಲ್ಬಂಗಳನ್ನು ಸೇರಿ, ನ್ಯೂಕ್ಲಿಯರ್ ಫ್ಯಾಮಿಲಿಗಳ ಪರಿಕಲ್ಪನೆಯಿಂದಾಚೆಗೂ ಈ ತಲೆಮಾರು ನಡೆದಿರುವ ಸಂದರ್ಭ ಇಂದಿನದು. 'ಸಂಗಾತಿ ಬೇಕು, ಸಾಂಗತ್ಯ ಸುಖವೂ ಬೇಕು, ಸಂತಾನ ಯಾಕೆ ಬೇಕು' ಎಂದು ಯುವ ತಲೆಮಾರಿನ ಕೆಲವರು ಯೋಚಿಸುತ್ತಿರುವುದನ್ನು ನೋಡಿದರೆ, ಕುಟುಂಬ ವ್ಯವಸ್ಥೆಯಲ್ಲಿ ಸಣ್ಣದೊಂದು ಕಂಪನ ಶುರುವಾದಂತೆ ಕಾಣಿಸುತ್ತಿದೆ. ಈ ಕಂಪನದ ಇನ್ನೊಂದು ತುದಿಗೆ, 'ಸಾಂತ್ವನ'ದ ಹೆಸರಿನಲ್ಲಿ ಸೇವೆಯನ್ನು ಒದಗಿಸುವ ಉದ್ಯಮವೊಂದು ಬೀಜರೂಪದಲ್ಲಿ ಆರಂಭಗೊಂಡಿದೆ. ಶುಲ್ಕವನ್ನು ತೆತ್ತು ಸಾಂತ್ವನದ ಅನುಭೂತಿಯನ್ನು ದೊರಕಿಸಿಕೊಡುವ ಈ ಸೇವೆ, ಕುಟುಂಬದಿಂದ ವ್ಯಕ್ತಿ ಪಡೆಯುತ್ತಿದ್ದ ನೆಮ್ಮದಿಗೆ ಪರ್ಯಾಯವಲ್ಲದಿದ್ದರೂ, ಹೊರದಾರಿಯಂತೂ ಆಗಿದೆ. ಈ ಸಾಮಾಜಿಕ ಚಲನೆಗಳು ದೂರದಲ್ಲೆಲ್ಲೋ ಘಟಿಸುತ್ತಿರುವ ವಿದ್ಯಮಾನಗಳಾಗಿ ಈಗ ಉಳಿದಿಲ್ಲ, ಅವುಗಳ ನೆರಳು ನಮ್ಮ ಸುತ್ತಮುತ್ತಲೂ ಇಣುಕುತ್ತಿದೆ.

■ **ವಿಶಾಖ ಎನ್.**